## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 284 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 15-02-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಇತ್ತೀಚೆಗೆ ಸುರಿದ ಮಳೆಯಿಂದಾಗಿ ಬೆಂಗಳೂರು-ಮೈಸೂರು ನಡುವಿನ ಮಾರ್ಗದಲ್ಲಿ ಮಳೆ ನೀರು ನಿಂತು ಸಂಚಾರಕ್ಕೆ ಅನಾನುಕೂಲ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>ಬೆಂಗಳೂರು-ಮೈಸೂರು (ರಾಷ್ಟ್ರೀಯ ಹೆದ್ದಾರಿ-275) ಹೆದ್ದಾರಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಸುಪರ್ದಿಯಲ್ಲಿರುತ್ತದೆ. ಸದರಿಯವರು ವರದಿಸಿರುವಂತೆ ದಿನಾಂಕ: 24-08-2022 ರಿಂದ 30-08-2022 (7 ದಿನ) ವರೆಗೆ ಭಾರೀ ಮಳೆಯಿಂದಾಗಿ ಜಲಾವೃತಗೊಂಡ ಸ್ಥಳಗಳ ವಿವರ ಈ ಕೆಳಕಂಡಂತಿದೆ.<br><br>1) ಬೆಂಗಳೂರು ನಗರದ ಸ್ವಾಮಿನಾರಾಯಣ ಗುರುಕುಲ ಶಾಲೆ-ಕಣಮಿಣಿಕೆ ಭಾಗವು ಹತ್ತಿರವಿರುವ ಕೆರೆಯಲ್ಲಿನ ಹರಿವು ಹೆಚ್ಚಾದ ಕಾರಣ ವಾಡಿಕೆಗಿಂತ ಹೆಚ್ಚುವರಿ ಮಳೆಯಾದ ಕಾರಣ ಮತ್ತು ನೈಸರ್ಗಿಕ ಕಣಿವೆ ಭಾಗವನ್ನು ಶಾಲೆಯವರು ಒತ್ತುವರಿ ಮಾಡಿರುವ ಕಾರಣ ಜಲಾವೃತಗೊಂಡಿರುತ್ತದೆ. |
| ಆ) | ಬಂದಿದ್ದಲ್ಲಿ, ಯೋಜನೆ ಯಲ್ಲಿನ ನ್ಯೂನತೆಗಳೇನು; ಸದರಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆಯೇ; | 2) ಶೇಷಗಿರಿಹಳ್ಳಿ ಟೋಲ್ ಪ್ಲಾಜಾ ಬಳಿ ಕೆರೆ ಇದ್ದು, ನಿರಂತರವಾಗಿ ಸುರಿದ ಭಾರಿ ಮಳೆಯಿಂದಾಗಿ ಕೆರೆ ಕೋಡಿ ಒಡೆದು ರಾಷ್ಟ್ರೀಯ ಹೆದ್ದಾರಿ ಪರಿಮಿತಿಯ ಹೊರಗಿರುವ 2 ಕಲ್ವರ್ಟ್‌ಗಳು ಹಾನಿಯಾಗಿದ್ದು, ಇದರಲ್ಲಿ ಈಗಾಗಲೇ ಕಲ್ಲುಗಳಿಂದ ಕೂಡಿದ ಕಸಕಡ್ಡಿಗಳು ತುಂಬಿರುವ ಕಾರಣ ಕಲ್ವರ್ಟ್‌ಗಳು ಕಾರ್ಯನಿರ್ವಹಿಸದಿರುವ ಕಾರಣ ನೈಜವಾಗಿ ನೀರು ಹರಿಯುವ ಮಾರ್ಗವು ಬದಲಾಗಿ, ನೀರು ಟೋಲ್ ಪ್ಲಾಜಾದ ಕಡೆಗೆ ಹರಿದು ಜಲಾವೃತಗೊಂಡಿರುತ್ತದೆ.<br><br>3) ಸಂಗಬಸವನದೊಡ್ಡಿ, ರಾಮನಗರ ಭಾಗದಲ್ಲಿ ಅಡ್ಡಮೋರಿಗಳು ಹಾಗೂ ಒಳಚರಂಡಿಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದ್ದ ಕಾರಣ ಮಳೆ ನೀರು ಹರಿಯಲು ಸಾಧ್ಯವಾಗದೆ ಜಲಾವೃತಗೊಂಡಿರುತ್ತದೆ.<br><br>4) ಮಂಡ್ಯ ಜಿಲ್ಲೆಯಲ್ಲಿ 60 ಕೆರೆಗಳಲ್ಲಿ ಕೋಡಿಯಿಂದಾಗಿ ಕಾಲುವೆ ಯಲ್ಲಿನ ಒಳಹರಿವು ಹೆಚ್ಚಾಗಿದ್ದು, Sluice gate ಇಲ್ಲದ ಕಾರಣ ಟ್ಯಾಂಕ್‌ನಲ್ಲಿನ ಒಳ ಹರಿವು / ಹೊರ ಹರಿವನ್ನು ನಿಯಂತ್ರಿಸಲು ಸಾಧ್ಯವಾಗದ ಕಾರಣ ಸುತ್ತಮುತ್ತಲಿನ ಪ್ರದೇಶ ನೀರಿನಿಂದ ಜಲಾವೃತಗೊಂಡಿರುತ್ತದೆ.<br><br>5) ಇದನ್ನು ತಡೆಗಟ್ಟಲು ಮಂಡ್ಯ ಜಿಲ್ಲಾ ಆಡಳಿತಾಧಿಕಾರಿ ಮತ್ತು ನೀರಾವರಿ ಇಲಾಖೆಯ ಪ್ರಾಧಿಕಾರದ ವತಿಯಿಂದ ಬಲವಂತವಾಗಿ ಕೋಡಿಯನ್ನು (Cut open the weirs) ಒಡೆದು ಎಲಿಯೂರು, ಕಿಲಾರ ತೈಲೂರು, ಮದ್ದೂರಮ್ಮ ಮತ್ತು ರಾಮಣ್ಣನ ಕೆರೆಗಳಿಗೆ ನೀರನ್ನು ಹರಿಯಲು ವ್ಯವಸ್ಥೆ ಕಲ್ಪಿಸಲು ನಿರ್ಧರಿಸಲಾಗಿರುತ್ತದೆ. |

| | | |
|---|---|---|
| | | ಮೇಲೆ ತಿಳಿಸಿರುವಂತೆ ಭಾರಿ ಮಳೆಯಿಂದಾಗಿ ಹಾಗೂ ಪ್ರಕೃತಿ ವಿಕೋಪದಿಂದ ಕೆಲವು ಭಾಗಗಳು ನೀರಿನಿಂದ ಜಲಾವೃತಗೊಂಡಿರುತ್ತದೆ. ಆದಕಾರಣ, ಯೋಜನೆಯಲ್ಲಿ ಯಾವುದೇ ತರಹದ ನ್ಯೂನತೆಯಿರುವುದಿಲ್ಲ. |
| ಇ) | ಈ ರಸ್ತೆಯಲ್ಲಿ ವನ್ಯಪ್ರಾಣಿಗಳು ವಾಹನಗಳಿಗೆ ಸಿಲುಕುವುದು ಹಾಗೂ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು? | ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ರಸ್ತೆಯು 6 ಪಥದ MCW ಪ್ರವೇಶ ನಿಯಂತ್ರಣ (Access Controlled) ರಸ್ತೆಯಾಗಿದ್ದು, ಎರಡೂ ಬದಿಗಳಲ್ಲಿ 2 ಪಥದ ಸರ್ವಿಸ್ ರಸ್ತೆಯಿಂದ ಕೂಡಿದ ರಸ್ತೆಯಾಗಿರುತ್ತದೆ. ಸದರಿ ಕಾಮಗಾರಿ ರಸ್ತೆಯನ್ನು ಗರಿಷ್ಠ ಮಿತಿ ಗಂಟೆಗೆ 100 ಕಿ.ಮೀ. ವೇಗಕ್ಕೆ ವಿನ್ಯಾಸಗೊಳಿಸಲಾಗಿರುತ್ತದೆ. ಈ ಕೆಳಕಂಡ ಕಾರಣಗಳಿಂದ ಸದರಿ ಹೆದ್ದಾರಿಯಲ್ಲಿ ಅಪಘಾತಗಳು ಸಂಭವಿಸುತ್ತಿವೆ.<br>1) ವಾಹನಗಳ ಅತಿ ವೇಗವು ಅಪಘಾತಕ್ಕೆ ಮುಖ್ಯ ಕಾರಣವಾಗಿರುತ್ತದೆ.<br>2) ಕೆಲವು ಸ್ಥಳಗಳಲ್ಲಿ ನಿರ್ಮಿಸಿರುವ ತಂತಿ ಬೇಲಿಯನ್ನು ಸ್ಥಳೀಯರು ತುಂಡರಿಸಿ ಪ್ರವೇಶ ನಿಯಂತ್ರಣ ರಸ್ತೆಯನ್ನು ದಾಟುತ್ತಿರುವುದರಿಂದ ಅಪಘಾತಗಳು ಸಂಭವಿಸುತ್ತಿದೆ.<br>3) ವಾಹನ ಚಾಲಕರು ಹೆದ್ದಾರಿಯಲ್ಲಿ Lane Discipline ಅನುಸರಿಸುತ್ತಿಲ್ಲ.<br>4) ದ್ವಿಚಕ್ರ ವಾಹನ ಚಾಲಕರು, ಆಟೋ ಚಾಲಕರು ಅಸುರಕ್ಷಿತ ರೀತಿಯಲ್ಲಿ ವಾಹನಗಳನ್ನು ಚಲಿಸುತ್ತಿರುತ್ತಾರೆ.<br>5) ಭಾರೀ ವಾಹನಗಳು ಮಂದ ಗತಿಯ ಲೇನ್‌ನ್ನು ಬಳಸುತ್ತಿಲ್ಲ.<br>6) ಮಂದ ಗತಿಯಲ್ಲಿ ಚಲಿಸುತ್ತಿರುವ ಕಾರುಗಳು ವೇಗದ ಲೇನ್‌ಗಳನ್ನು ಬಳಸುತ್ತಿದ್ದು, ವೇಗದಲ್ಲಿ ಚಲಿಸುವ ವಾಹನ ಸವಾರರುಗಳಿಗೆ ಗೊಂದಲವುಂಟಾಗುತ್ತಿದೆ.<br>7) ಕೆಲವು ಭಾಗಗಳಲ್ಲಿ ದ್ವಿಚಕ್ರ ಸವಾರರು ಹಾಗೂ ಆಟೋ ಚಾಲಕರು ಮಧ್ಯ ಪಥವನ್ನು ಬಳಸುತ್ತಿದ್ದಾರೆ.<br>ವನ್ಯ ಜೀವಿಗಳಿಗೆ ಹೆದ್ದಾರಿಯನ್ನು ದಾಟಲು MOEF (Ministry of Environment & Forest) ಮತ್ತು ಅರಣ್ಯ ಇಲಾಖೆಯ ನಿಯಮದಂತೆ ಸಾನಗಬಸವನದೊಡ್ಡಿ ಬಳಿ ವನ್ಯ ಜೀವಿಗಳ ಚಲನ–ವಲನಕ್ಕೆ ಅನುಗುಣವಾಗಿ ಹೆದ್ದಾರಿ ದಾಟಲು ಅಂಡರ್ ಪಾಸ್, ರಾಮನಗರ ಜಿಲ್ಲೆಯ ಬಸವನಪುರದ ಬಳಿ ಓವರ್ ಪಾಸ್, ಶ್ರೀರಂಗಪಟ್ಟಣದ ಸಬ್ಬನಕುಪ್ಪೆ ಗ್ರಾಮದ ಬಳಿ ಅಂಡರ್ ಪಾಸ್ ಮತ್ತು ಓವರ್ ಪಾಸ್ ಎರಡನ್ನೂ ನಿರ್ಮಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ. |

ಕಡತ ಸಂಖ್ಯೆ: ಲೋಇ 36 ಸಿಎನ್‌ಹೆಚ್ 2023 (ಇ)

(ಸಿ.ಸಿ.ಪಾಟೀಲ)
ಲೋಕೋಪಯೋಗಿ ಸಚಿವರು